# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

## ಅಧಿಸೂಚನೆ

**ಸಂಖ್ಯೆ: ಕವಿಪ್ರನಿನಿ/ಬಿ16/86473/2018-19** **ದಿನಾಂಕ:** 10 DEC 2019

**ವಿಷಯ:** ಕವಿಪ್ರನಿನಿ ಮತ್ತು ಎಸ್ಕಾಂಗಳಲ್ಲಿ ಕಿರಿಯ ಸ್ಟೇಷನ್ ಪರಿಚಾರಕ ಮತ್ತು ಕಿರಿಯ ಪವರ್‌ಮ್ಯಾನ್ ಹುದ್ದೆಯ ನೇಮಕಾತಿ- ಸಹನಾ ಶಕ್ತಿ ಪರೀಕ್ಷೆ ನಡೆಸುವ ಬಗ್ಗೆ.

**ಉಲ್ಲೇಖ:**
1. ಉದ್ಯೋಗ ಪ್ರಕಟಣೆ ಸಂಖ್ಯೆ: ಕವಿಪ್ರನಿನಿ/ಬಿ16/86473/2018-19, ದಿನಾಂಕ: 25.02.2019 ಮತ್ತು 11.03.2019.
2. ಉದ್ಯೋಗ ಪ್ರಕಟಣೆ ಸಂಖ್ಯೆ: ಕವಿಪ್ರನಿನಿ/ಬಿ16/3590/89-90(2), ದಿನಾಂಕ: 28.03.2019.
3. ಅಧಿಸೂಚನೆ ಸಂಖ್ಯೆ: ಕವಿಪ್ರನಿನಿ/ಬಿ16/86473/2018-19, ದಿನಾಂಕ: 05.10.2019.
4. ಹೆಸ್ಕಾಂನ ಪತ್ರಿಕಾ ಪ್ರಕಟಣೆ ಸಂಖ್ಯೆ: ಹೆಚ್‌ಸಿಓ-07/ಸಿ-120/2018-19, ದಿನಾಂಕ: 21.10.2019.

*****

ಕವಿಪ್ರನಿನಿ ಮತ್ತು ಎಸ್ಕಾಂಗಳಲ್ಲಿ ಕಿರಿಯ ಸ್ಟೇಷನ್ ಪರಿಚಾರಕ ಹಾಗೂ ಕಿರಿಯ ಪವರ್‌ಮ್ಯಾನ್ ಹುದ್ದೆಗಳ ನೇಮಕಾತಿಗೆ ಸಂಬಂಧಿಸಿದಂತೆ, ರಾಜ್ಯಾದ್ಯಂತ ವಿವಿಧ ಕೇಂದ್ರಗಳಲ್ಲಿ **ದಿನಾಂಕ: 21.10.2019 ರಿಂದ 25.10.2019** ರವರೆಗೆ ಸಹನಾ ಶಕ್ತಿ ಪರೀಕ್ಷೆಯನ್ನು ನಡೆಸಲಾಗಿರುತ್ತದೆ. ಆದರೆ ಕವಿಪ್ರನಿನಿಯ ಬೆಂಗಳೂರು ವಲಯ ವ್ಯಾಪ್ತಿಯಲ್ಲಿ **ದಿನಾಂಕ: 22.10.2019 ರಂದು** ಮತ್ತು ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತದಲ್ಲಿ **ದಿನಾಂಕ: 21.10.2019 ರಿಂದ 23.10.2019 ರವರೆಗೆ** ನಡೆಯಬೇಕಿದ್ದ ಸಹನಾ ಶಕ್ತಿ ಪರೀಕ್ಷೆಯನ್ನು **ಮಳೆಯ ಕಾರಣದಿಂದಾಗಿ ಮುಂದೂಡಲಾಗಿರುತ್ತದೆ.**

ಸದರಿ ಕೇಂದ್ರಗಳಲ್ಲಿನ ಸಹನಾ ಶಕ್ತಿ ಪರೀಕ್ಷೆಯನ್ನು **ದಿನಾಂಕ: 26.12.2019 ರಿಂದ 28.12.2019 ರವರೆಗೆ** ನಡೆಸಲಾಗುವುದು. ಕವಿಪ್ರನಿನಿ ಹಾಗೂ ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿಯ ವೆಬ್‌ಸೈಟ್‌ನಿಂದ ಸಹನಾ ಶಕ್ತಿ ಕರೆ ಪತ್ರಗಳನ್ನು **ದಿನಾಂಕ: 16.12.2019** ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿರುತ್ತದೆ. ಕರೆ ಪತ್ರದಲ್ಲಿ ನಿಗಧಿಪಡಿಸಿರುವ ದಿನಾಂಕ ಮತ್ತು ಕೇಂದ್ರದಲ್ಲಿ, ಸಂಬಂಧಪಟ್ಟ ಎಲ್ಲಾ ದಾಖಲಾತಿಗಳ ಮೂಲ ಹಾಗೂ ಝೆರಾಕ್ಸ್ ಪ್ರತಿಗಳೊಂದಿಗೆ ಅಭ್ಯರ್ಥಿಗಳು ಸಹನಾ ಶಕ್ತಿ ಪರೀಕ್ಷೆಗೆ ಹಾಜರಾಗತಕ್ಕದ್ದು. ಸಹನಾ ಶಕ್ತಿ ಪರೀಕ್ಷೆಯ ದಿನಾಂಕ ಮತ್ತು ಕೇಂದ್ರಗಳ ಬದಲಾವಣೆ ಬಗ್ಗೆ ಯಾವುದೇ ಮನವಿ/ಕೋರಿಕೆಗಳನ್ನು ಪರಿಗಣಿಸಲಾಗುವುದಿಲ್ಲ.

ಸಹನಾ ಶಕ್ತಿ ಪರೀಕ್ಷೆಗೆ ಇ-ಕರೆ ಪತ್ರವನ್ನು ಪಡೆದುಕೊಳ್ಳಲು ತೊಂದರೆ ಉಂಟಾದಲ್ಲಿ, ಅಭ್ಯರ್ಥಿಯು ಯಾವ ಕಂಪನಿಯಲ್ಲಿ 1:5 ರ ಅನುಪಾತದಲ್ಲಿ ಆಯ್ಕೆಯಾಗಿರುತ್ತಾರೊ ಆ ಕಂಪನಿಯ ಸಹಾಯವಾಣಿಯನ್ನು ಕಚೇರಿಯ ಕೆಲಸದ ವೇಳೆಯಲ್ಲಿ ಸಂಪರ್ಕಿಸುವುದು. ಇನ್ನುಳಿದ ಹೆಚ್ಚಿನ ಮಾಹಿತಿಯನ್ನು ಕರೆ ಪತ್ರದಲ್ಲಿ ನೀಡಲಾಗಿರುತ್ತದೆ.

| ನಿಗಮ/ಕಂಪನಿಯ ಹೆಸರು | ಸಹನಾ ಶಕ್ತಿ ಪರೀಕ್ಷೆಯ ದಿನಾಂಕ | ವೆಬ್‌ಸೈಟ್ | ಸಹಾಯವಾಣಿ ಸಂಖ್ಯೆ |
|---|---|---|---|
| ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ (ಕವಿಪ್ರನಿನಿ) | 27.12.2019 | www.kptcl.com | 080-22211527<br>Ext 3789, 3872 |
| ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ (ಹುವಿಸಕಂನಿ) | 26.12.2019 ರಿಂದ 28.12.2019 | www.hescom.co.in | 0836-2223867,<br>0836-2223865 |

***ಸೂಚನೆ:***

1. **ಕವಿಪ್ರನಿನಿಯ ಬೆಂಗಳೂರು ವಲಯ ವ್ಯಾಪ್ತಿಯಲ್ಲಿ ದಿನಾಂಕ: 22.10.2019 ರಂದು ಸಹನಾ ಶಕ್ತಿ ಪರೀಕ್ಷೆಗೆ ಹಾಜರಾಗಿ, ದಾಖಲಾತಿ ಪರಿಶೀಲನೆಯಲ್ಲಿ ಅರ್ಹತೆಗೊಂಡಿರುವ ಅಭ್ಯರ್ಥಿಗಳಿಗೆ ಮಾತ್ರ ಸಹನಾ ಶಕ್ತಿ ಪರೀಕ್ಷೆಯನ್ನು ನಡೆಸಲಾಗುವುದು. ದಿನಾಂಕ: 22.10.2019 ರಂದು ಗೈರುಹಾಜರಾಗಿದ್ದ ಅಭ್ಯರ್ಥಿಗಳನ್ನು ಸಹನಾಶಕ್ತಿ ಪರೀಕ್ಷೆಗೆ ಪರಿಗಣಿಸಲಾಗುವುದಿಲ್ಲ.**
2. *ಆನ್‌ಲೈನ್ ಅರ್ಜಿಯನ್ನು ಭರ್ತಿ ಮಾಡುವಾಗ ಕೆಲವು ಅಭ್ಯರ್ಥಿಗಳು ಅಂಕಗಳನ್ನು ತಪ್ಪಾಗಿ ನಮೂದಿಸಿರುತ್ತಾರೆ. ಅಭ್ಯರ್ಥಿಯ ಮೂಲ ಅಂಕಪಟ್ಟಿಯನ್ನು ಸಹನಾ ಶಕ್ತಿ ಪರೀಕ್ಷೆ ದಿನದಂದು ಪರಿಶೀಲಿಸಿದ ನಂತರ, ಸದರಿಯವರ ಶೇಕಡವಾರು ಅಂಕವು ನಿಗಧಿಪಡಿಸಿದ ಕ್ಯಾಟಗರಿಯ ಕಟ್ ಆಫ್‌ಗಿಂತ (Cut-off) ಹೆಚ್ಚಿದ್ದಲ್ಲಿ ಮಾತ್ರ ಸಹನಾ ಶಕ್ತಿ ಪರೀಕ್ಷೆಗೆ ಪರಿಗಣಿಸಲಾಗುವುದು. ಒಂದು ವೇಳೆ ಅಭ್ಯರ್ಥಿಯ ಶೇಕಡವಾರು ಅಂಕವು ನಿಗಧಿಪಡಿಸಿದ ಕಟ್ ಆಫ್‌ಗಿಂತ ಕಡಿಮೆ ಇದ್ದಲ್ಲಿ, ಅಂತಹವರನ್ನು ಸಹನಾ ಶಕ್ತಿ ಪರೀಕ್ಷೆಗೆ ಪರಿಗಣಿಸುವುದಿಲ್ಲ.*

ನಿರ್ದೇಶಕರು
(ಆಡಳಿತ ಮತ್ತು ಮಾನವ ಸಂಪನ್ಮೂಲ)
ನಿಗಮ ಕಾರ್ಯಾಲಯ, ಕವಿಪ್ರನಿನಿ,
ಕಾವೇರಿ ಭವನ, ಬೆಂಗಳೂರು.